ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ನಟರಾಜನ್

ದಿ ನ್ಯೂ ಇಂಡಿಯಾ ಅಶೂರೆನ್ಸ್ ಕಂಪನಿ ಅಮಿಟೆಡ್ -ವಿರುದ್ದ ಬಾಬಣ್ಣ ಎಚ್. ಅಲಿಯಾಸ್ ಬಾಬು ಮತ್ತು ಇತರರು*

ಸಂಕೀರ್ಣ ಪ್ರಥಮ ಅಪೀಲು ಸಂಖ್ಯೆ: 101029/2016(ಎಂವಿ) ಇದರೊಂದಿಗೆ ಇತರೆ, ದಿನಾಂಕ 23ನೇ ಆಗಸ್ಟ್, 2019

ತೀರ್ಪು

ನ್ಯಾಯಮೂರ್ತಿ ಶ್ರೀ ಕೆ. ನಟರಾಜನ್:

ಎಂ.ಎಫ್.ಎ.ಸಂಖ್ಯೆ: 101029/2016 ರಲ್ಲಿನ ಠೇವಣಿ ಮೊಬಲಗನ್ನು ಹಿಂದಕ್ಕೆ ಪಡೆಯುವುದಕ್ಕಾಗಿ ಪ್ರತ್ಯರ್ಜಿದಾರ-ಕ್ಲೀನರ್ ಸಲ್ಲಿಸಿದ ಮಧ್ಯಂತರ ಅಪೀಲು 488 ಸಂಖ್ಯೆ:1/2019 ರ ಮೇಲಿನ ಸುನಾವಣೆಗಾಗಿ ಅಪೀಲುಗಳನ್ನು ಪಟ್ಟಿ ಮಾಡಲಾಗಿದ್ದಾಗ್ಯೂ, ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಸಮ್ಮತಿಯೊಂದಿಗೆ ಅಂತಿಮವಾಗಿ ಇದನ್ನು ಆಲಿಸಲಾಗಿರುತ್ತದೆ.

2. ಎಂ.ವಿ.ಸಿ.ಸಂಖ್ಯೆ: 760/2013 ರಲ್ಲಿನ ಮೋಟಾರು ವಾಹನ ಅಪಘಾತ ಕ್ಲೇಮು ನ್ಯಾಯಾಧಿಕರಣ-II, ಬಳ್ಳಾರಿ (ಸಂಕ್ಷಿಪ್ತವಾಗಿ ನ್ಯಾಯಾಧಿಕರಣ ಎಂದು ಕರೆಯಲಾಗಿದೆ.) ಇವರು ಹೊರಡಿಸಿದ ತೀರ್ಪು ಹಾಗೂ ಐತೀರ್ಪನ್ನು ನಿರಾಕರಿಸಿ, ವಿಮಾದಾರನು ಎಂ.ಎಫ್.ಎ.ಸಂಖ್ಯೆ: 101029/2016 ನ್ನು ಸಲ್ಲಿಸಿರುವುದರಿಂದ, ಸದರಿ ನ್ಯಾಯಾಧಿಕರಣವು ಹೊರಡಿಸಿದ ತೀರ್ಪು ಹಾಗೂ ಐತೀರ್ಪನ್ನು ನಿರಾಕರಿಸಿ ಪರಿಹಾರವನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಕ್ಲೇಮುದಾರನು ಎಂ.ಎಫ್.ಎ.ಸಂಖ್ಯೆ: 103862/2016 ನ್ನು ಸಲ್ಲಿಸಿರುತ್ತಾನೆ.

3. ನಾನು ಇಬ್ಬರು ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದ-ವಿವಾದಗಳನ್ನು ಆಲಿಸಿರುತ್ತೇನೆ.

4. ಅನುಕೂಲಕ್ಕಾಗಿ, ನ್ಯಾಯಾಧಿಕರಣದ ಮುಂದೆ ಪಕ್ಷಕಾರರು ಹೊಂದಿದ್ದ ಕ್ರಮಾನುಗತ ಶ್ರೇಣಿಯನ್ನೇ ಇಲ್ಲಿಯೂ ಉಳಿಸಿಕೊಂಡಿರುತ್ತೇವೆ.

5. ಕೇಮುದಾರರು, ಪ್ರತ್ಯರ್ಜಿದಾರನಿಂದ 10,00,000/-ರೂಪಾಯಿಗಳ ಪರಿಹಾರವನ್ನು ಕ್ಲೇಮು ಮಾಡಿ ಮೋಟರು ವಾಹನಗಳ ಅಧಿನಿಯಮ, 1988 ಡಿ (ಸಂಕ್ಷಿಪ್ತತೆಗಾಗಿ ' ಅಧಿನಿಯಮ ' ಎಂದು ಕರೆಯಲಾಗಿರುತ್ತದೆ) 166 ನೇ ಪ್ರಕರಣದಡಿಯಲ್ಲಿ ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾನೆ.ಈ ಅರ್ಜಿಯಲ್ಲಿ ಇತರ ವಿಷಯಗಳೊಂದಿಗೆದಿನಾಂಕ: 20.6.2013 ರಂದು ವಾಹನದ ಮಾಲೀಕನಾದ 2 ನೇ ಪ್ರತ್ಯರ್ಜಿದಾರನು ಬೈಲೂರು ಗ್ರಾಮದ ಚಾನಲ್ ಕ್ರಾಸಿನ ಈರಣ್ಣ ಗುಡಿಯ ಬಳಿ ಕೆಎ -34/ಟಿ -8796 ಹಾಗೂ 8797 ಎಂಬ ನೋಂದಣಿ ಸಂಖ್ಯೆಯನ್ನು ಹೊಂದಿದ್ದ ಟ್ರಾಕ್ಟರ್-ಟ್ರೇಲರ್ನಲ್ಲಿ ರಸಗೊಬ್ಬರವನ್ನು ತುಂಬುವ ಹಾಗೂ ಇಳಿಸುವ ಕೆಲಸಕ್ಕೆ ಅರ್ಜಿದಾರನನ್ನು ನೇಮಿಸಿದ್ದ.ಆ ಸಂಬಂಧದಲ್ಲಿ ಟ್ರ್ಯಾಕ್ಟರ್ ಹಾಗೂ ಟ್ರೇಲರ್ನ ಚಾಲಕನಾಗಿರುವ 1 ನೇ ಪ್ರತ್ಯರ್ಜಿದಾರನು ಅತಿ ವೇಗದಿಂದ ಅತ್ಯಾತುರ ಮತ್ತು ನಿರ್ಲಕ್ಷ್ಯದಿಂದ ಚಾಲನೆ ಮಾಡುತ್ತಾ ಬಂದುದರಿಂದ ಟ್ರ್ಯಾಕ್ಟರ್ ಮೊಗಚಿಕೊಂಡು ಅರ್ಜಿದಾರನು ಕೆಳಗೆ ಬಿದ್ದು, ತೀವ್ರತರವಾದ ಗಾಯಗಳಿಗೆ ಈಡಾಗಿರುತ್ತಾನೆ.ಆ

ತರುವಾಯ, ಈತನನ್ನು ಕೂಡಲೇ ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಸ್ಥಳಾಂತರಿಸಿ, ಅಲ್ಲಿ ಆತನಿಗೆದಿನಾಂಕ: 21.06.2013 ರಿಂದ 12.07.2013 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ನೀಡಲಾಗಿರುತ್ತದೆ.ಆತನು ಬಲ ಮುಂದೋಳಿನ ಒಳ ಎಲುಬಿಗೆ ಸಂಬಂಧಿಸಿದ ಶಸ್ತ್ರಚಿಕಿತ್ಸೆಗೆ ಒಳಗಾದನು.ಆ ತರುವಾಯ, ಖಾಸಗಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಯನ್ನು ಪಡೆದು, ವೈದ್ಯಕೀಯ ವೆಚ್ಚಗಳಿಗಾಗಿ ಹೆಚ್ಚಿನ ಹಣವನ್ನು ಖರ್ಚು ಮಾಡಿರುತ್ತಾನೆ.ಅವನಿಗೆ ಗಾಯಗಳುಂಟಾದ್ದರಿಂದಾಗಿ, ಆತನಿಗೆ ಅಂಗವೈಕಲ್ಯವುಂಟಾಗಿ, ಕೂಲಿ ಕೆಲಸಕ್ಕೆ ಹೋಗಲೂ ಸಹ ಅಸಮರ್ಥನಾಗಿರುತ್ತಾನೆ.ಈ ಘಟನೆಗೆ ಮೊದಲು ಆತ ದಿನಕ್ಕೆ 400/-ರೂಪಾಯಿಗಳನ್ನು ಗಳಿಸುತ್ತಿದ್ದು, ಈಗ ತನ್ನ ಗಳಿಕೆಯ ಸಾಮರ್ಥ್ಯವನ್ನು ಕಳೆದುಕೊಂಡಿರುತ್ತಾನೆ.ಹಾಗಾಗಿ, ಹಲವಾರು ಶೀರ್ಷಿಕೆಗಳ ಅಡಿಯಲ್ಲಿ ಪರಿಹಾರ ನೀಡುವಂತೆ ಕೋರಿರುತ್ತಾನೆ.

6. ನೋಟೀಸಿಗೆ ಅನುಸಾರವಾಗಿ, 1-3ರವರೆಗಿನ ಪ್ರತ್ಯರ್ಜಿದಾರರು ತಮ್ಮ ವಕೀಲರ ಮೂಲಕ ಹಾಜರಾಗಿದ್ದು, ಅರ್ಜಿದಾರರ ವಯಸ್ಸು, ಉದ್ಯೋಗ, ಆದಾಯಗಳು ಸುಳ್ಳೆಂದು ನಿರಾಕರಿಸಿ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.ಮು ಂ ದುವರೆದು, ಅರ್ಜಿದಾರನು, 1 ಹಾಗೂ 2 ನೇ ಪ್ರತ್ಯರ್ಜಿದಾರರೊಂದಿಗೆ ಷಾಮೀಲಾಗಿ ಪರಿಹಾರವನ್ನು ಕ್ಲೇಮು ಮಾಡುವ ಸಲುವಾಗಿ 1 ನೇ ಪ್ರತ್ಯರ್ಜಿದಾರನ ವಿರುದ್ಧ ಸುಳ್ಳು ಹಾಗೂ ಕ್ಷುಲ್ಲಕ ದೂರನ್ನು ದಾಖಲಿಸಿದ್ದಾನೆಂದು ವಾದಿಸುತ್ತಾ, 1 ನೇ ಪ್ರತ್ಯರ್ಜಿದಾರ ಹಾಗೂ 3 ನೇ ಪ್ರತ್ಯರ್ಜಿದಾರರ ಮೇಲಿನ ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯ ಆರೋಪವನ್ನು ನಿರಾಕರಿಸಿರುತ್ತಾರೆ.ಮುಂದುವರೆದು, ಟ್ರ್ಯಾಕ್ಟರ್ಅನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿದ್ದು, ಆ ಮೂಲಕ ಕಾರ್ಯನೀತಿಯ ನಿಬಂಧನೆ ಹಾಗೂ ಷರತ್ತುಗಳನ್ನು ಉಲ್ಲಂಘಿಸಲಾಗಿರುತ್ತದೆಂದು ವಾದಿಸಲಾಗಿದೆ.ಮಾಲೀಕನು ಆರ್ಟಿಓ ಅಧಿಕಾರಿಗಳಿಂದ ಅನುಮತಿ ಪಡೆದುಕೊಳ್ಳಬೇಕಾಗಿತ್ತು ಹಾಗೂ ಟ್ರ್ಯಾಕ್ಟರ್ ಒಂದೇ ಒಂದು ಆಸನ ವ್ಯವಸ್ಥೆಯಿರುವಂಥ ಕೇವಲ ಕೃಷಿ ಉದ್ದೇಶಕ್ಕಾಗಿಯೇ ರೂಪಿಸಲ್ಪಟ್ಟಿರುವಂಥದ್ದಾಗಿರುತ್ತದೆ.ಅರ್ಜಿದಾರರ ಕ್ಲೇಮು ಪಾಲಿಸಿ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ವಾದಿಸಿದ್ದಾರೆ.ಮುಂದುವರೆಸುತ್ತಾ, 1 ನೇ ಪ್ರತ್ಯರ್ಜಿದಾರನು ಸಿಂಧುವಾದ ಚಾಲನಾ ಪರವಾನಗಿಯನ್ನು ಹೊಂದಿರಲಿಲ್ಲವೆಂದು ವಾದಿಸಲಾಗಿರುತ್ತದೆ.ಪ್ರತಿಯಾಗಿ, ಅರ್ಜಿದಾರನ ಕ್ಲೇಮು ಅತಿ ಹೆಚ್ಚಿನದ್ದಾಗಿದ್ದು, ಅತ್ಯಂತ ದುಬಾರಿಯ ಮೊತ್ತ ಒಳಗೊಂಡಿದೆಯೆಂದು, ಹಾಗಾಗಿ, ಕ್ಲೇಮು ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

7. ಪರಸ್ಪರ ತದ್ವಿರುದ್ಧವಾದ ವಾದಗಳನ್ನು ಆಧರಿಸಿ, ನ್ಯಾಯಾಧಿಕರಣವು ಈ ಮುಂದಿನ ವಿವಾದಾಂಶಗಳನ್ನು ರೂಪಿಸಿರುತ್ತದೆ:

( 1) ಬೈಲೂರು ಗ್ರಾಮದ ಚಾನಲ್ ಕ್ರಾಸಿನ ಈರಣ್ಣ ಗುಡಿಯ ಬಳಿದಿನಾಂಕ: 20.6.2013 ರ ರಾತ್ರಿ 7.30 ಕ್ಕೆ ಕೆಎ -34/ಟಿ -8796 ಹಾಗೂ 8797 ಎಂಬ ನೋಂದಣಿ ಸಂಖ್ಯೆಯನ್ನು ಹೊಂದಿದ್ದ ಟ್ರ್ಯಾಕ್ಟರ್ ಟ್ರೇಲರನ್ನುಪ್ರಾಣಾಪಾಯ ತಂದೊಡ್ಡುವ ರೀತಿಯಲ್ಲಿ ಚಾಲನೆ ಮಾಡಿ, ರಸ್ತೆ ಮೇಲೆ ಮೊಗಚಿಕೊಂಡಾಗ, ಸದರಿ ಟ್ರ್ಯಾಕ್ಟರ್ ಟ್ರೇಲರ್ನಲ್ಲಿ ರಸಗೊಬ್ಬರವನ್ನು ತುಂಬುವ ಕೆಲಸಗಾರನಾಗಿ ಅರ್ಜಿದಾರನು ಪ್ರಯಾಣಿಸುವಾಗ, ಸದರಿ ಟ್ರ್ಯಾಕ್ಟರ್-ಟ್ರೇಲರ್ನಿಂದ ಬಿದ್ದು ಗಾಯಗೊ ಂ ಡನೆ ಂ ಬುದನ್ನು ಅರ್ಜಿದಾರನು ರುಜುವಾತು ಪಡಿಸಿರುತ್ತಾನೆಯೇ?

( 2) ಅರ್ಜಿದಾರನು ಪರಿಹಾರಕ್ಕೆ ಹಕ್ಕುಳ್ಳವನಾಗಿರುತ್ತಾನೆಯೇ?ಹಾಗಿದ್ದಲ್ಲಿ, ಎಷ್ಟು ಪರಿಹಾರ ನೀಡಬೇಕು ಹಾಗೂ ಯಾರು ನೀಡಬೇಕು?

( 3) ಇದಕ್ಕೆ ಸಂಬಂಧಿಸಿದಂತೆ ಯಾವ ಆದೇಶ ಅಥವಾ ಐತೀರ್ಪು ಇರುತ್ತದೆ?

8. ಅರ್ಜಿದಾರರ ವಾದವನ್ನು ರುಜುವಾತುಪಡಿಸಲು, ಸ್ವತಃ ಅರ್ಜಿದಾರನು ಪ್ರಾ.ಸಾ.| ಎ ೦ ದು ವಿಚಾರಣೆಗೆ ಒಳಗಾಗಿದ್ದಾನೆ.ಅಲ್ಲದೆ, ಡಾ || ಲಕ್ಷ್ಮೀ ಎ(ರ ನಾರಾಯಣರವರನ್ನು ಪ್ರಾ.ಸಾ .2 ಎಂದು ವಿಚಾರಣೆಗೊಳಪಡಿಸಿದ್ದು, 32 ದಸ್ತಾವೇಜುಗಳನ್ನು ನಿಶಾನೆ ಪಿ .1 ರಿಂದ ಪಿ .32 ರವರೆಗೆ ಗುರುತು ಮಾಡಲಾಗಿದೆ.3 ನೇ ಪ್ರತ್ಯರ್ಜಿದಾರನ ಪರವಾಗಿ, ವಿಮಾದಾರ ಕಂಪನಿಯ ಆಡಳಿತಾಧಿಕಾರಿಯನ್ನು ಆರ್.ಡಬ್ಲ್ಯು.ಎಂದು ವಿಚಾರಣೆಗೊಳಪಡಿಸಿ, 12 ದಸ್ತಾವೇಜುಗಳನ್ನು ನಿಶಾನೆ ಆರ್ .1 ರಿಂದ ಆರ್ .12 ಎಂದು ಗುರುತು ಮಾಡಲಾಗಿರುತ್ತದೆ.

9. ದಾಖಲೆಯಲ್ಲಿರುವ ಸಾಕ್ಷ್ಯವನ್ನು ಪರಿಗಣಿಸಿದ ತರುವಾಯ, ನ್ಯಾಯಾಧಿಕರಣವು 1 ನೇ ವಿವಾದಾಂಶಕ್ಕೆ ಧನಾತ್ಮಕವಾಗಿ, 2 ನೇ ವಿವಾದಾಂಶಕ್ಕೆ ಭಾಗಶಃ ಧನಾತ್ಮಕವಾಗಿ ಉತ್ತರಿಸಿದ್ದು ಅರ್ಜಿಯನ್ನು ಭಾಗಶಃ ಅಂಗೀಕರಿಸಿ, ಈ ಮುಂದಿನಂತೆ ವಿಮಾ ಕಂಪನಿಯ ಮೇಲೆ ಹೊಣೆಗಾರಿಕೆಯನ್ನು ಹೊರಿಸುವ ಮೂಲಕ ಶೇ .6 ರಷ್ಟು ಬಡ್ಡಿ ದರದೊಂದಿಗೆ ಹಲವಾರು ಶೀರ್ಷಿಕೆಗಳಡಿಯಲ್ಲಿ 1,26,330/-ರೂಪಾಯಿಗಳ ಪರಿಹಾರವನ್ನು ನೀಡುವಂತೆ ಐತೀರ್ಪು ನೀಡಿತು:

| **ನೋವು ಮತ್ತು ಸಂಕಟ** | **20,000 / - ರೂಪಾಯಿಗಳು .** |
|---|---|
| ಶುಶ್ರೂಷೆ , ಉಪಚಾರ ಹಾಗೂ ಹೆಚ್ಚುವರಿ ಪೋಷಣೆ ಒಳಗೊಂಡಂತೆ ವೈದ್ಯಕೀಯ ವೆಚ್ಚಗಳು | 30,430 / - ರೂಪಾಯಿಗಳು . |
| ಚಿಕಿತ್ಸೆಯ ಅವಧಿಯಲ್ಲಿ ಆದಾಯ ನಷ್ಟ | 2,500 / - ರೂಪಾಯಿಗಳು . |
| ಶಾಶ್ವತ ಅಂಗವೈಕಲ್ಯದ ಕಾರಣಕ್ಕಾಗಿ ಭವಿಷ್ಯದಲ್ಲಿ ಗಳಿಕೆ ಸಾಮರ್ಥ್ಯದ ನಷ್ಟ | 71,400 / - ರೂಪಾಯಿಗಳು . |
| ಭವಿಷ್ಯದ ವೈದ್ಯಕೀಯ ವೆಚ್ಚ | 5,000 / - ರೂಪಾಯಿಗಳು . |
| ಒಟ್ಟು | 1,26,330 / - ರೂಪಾಯಿಗಳು . |

10. ನ್ಯಾಯಾಧಿಕರಣವು ಹೊರಡಿಸಿದ ತೀರ್ಪು ಹಾಗೂ ಐತೀರ್ಪನ್ನು ನಿರಾಕರಿಸಿ, ವಿಮಾದಾರನು ಪರಿಹಾರದ ಹೊಣೆಗಾರಿಕೆ ಹಾಗೂ ಪ್ರಮಾಣವನ್ನು ಹೊರಿಸುವ ಆಧಾರದ ಮೇಲೆ ಎಂ.ಎಫ್.ಎಸಂಖ್ಯೆ: 102029/2016 ನ್ನು ಸಲ್ಲಿಸಿದ್ದರಿಂದಾಗಿ, ಕೇಮುದಾರರು ಪರಿಹಾರದ ಹೆಚ್ಚಳಕ್ಕೆ ಸಂಬಂಧಿಸಿದಂತೆ ಎಂಎಫ್ಎಸಂಖ್ಯೆ: 103862/2016 ಸಲ್ಲಿಸಿರುತ್ತಾರೆ.

11. ವಿಮಾದಾರರ ಪರ ಹಾಜರಾದ ಮಾನ್ಯ ವಕೀಲರು, ಕ್ಲೇಮುದಾರರ ಪ್ರಸ್ತುತ ಈ ವಾದವು ಕ್ಲೇಮುದಾರರು ಹಾಗೂ 1 ನೇ ಹಾಗೂ 2 ನೇ ಪ್ರತ್ಯರ್ಜಿದಾರರು ಆಪಾದಿಸಿದಂತೆ ಯಾವ ಅಪಘಾತವು ಸಂಭವಿಸಿಲ್ಲದಿದ್ದರೂ, ಪರಿಹಾರವನ್ನು ಕ್ಲೇಮು ಮಾಡುವ ಉದ್ದೇಶಕ್ಕಾಗಿ ಸೃಜಿಸಿರುವಂತಹ ಕಟ್ಟುಕತೆಯಾಗಿರುವುದೆಂದು ವಾದಿಸಿರುತ್ತಾರೆ.ಕ್ಲೇಮುದಾರನು ಆಸ್ಪತ್ರೆಯಲ್ಲಿ ದಾಖಲಾಗಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದರೂ, ರಸ್ತೆ ಅಪಘಾತದಲ್ಲಿ ತನಗೆ ಗಾಯಗಳುಂಟಾದ ಬಗ್ಗೆ ಒಂದೇ ಒಂದು ಮಾತನ್ನು ಆಡಿರುವುದಿಲ್ಲ.ಅಪಘಾತವಾದ ಕೂಡಲೇ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸದೆ, ಒಂದು ತಿಂಗಳ ದೀರ್ಘಕಾಲೀನ ವಿಳಂಬದ ತರುವಾಯ ದೂರು ದಾಖಲಿಸಲಾಗಿರುತ್ತದೆ.ಕ್ಲೇಮುದಾರನು ಆಸ್ಪತ್ರೆಯಿಂದ ಬಿಡುಗಡೆಯಾದ ತರುವಾಯವೂ ಸಹ, ಕೂಡಲೇ ದೂರನ್ನು ದಾಖಲಿಸಿರುವುದಿಲ್ಲ.ಆಸ್ಪತ್ರೆಯಿಂದ ಬಿಡುಗಡೆಯಾದ 18 ದಿನಗಳ ತರುವಾಯ ದೂರನ್ನು ದಾಖಲಿಸಿರುತ್ತಾನೆ ಹಾಗೂ ಪರಿಹಾರವನ್ನು ಕ್ಲೇಮು ಮಾಡಿಕೊಳ್ಳುವುದಕ್ಕಾಗಿ 1 ನೇ ಹಾಗೂ 2 ನೇ ಪ್ರತ್ಯರ್ಜಿದಾರರೊಂದಿಗೆ ಷಾಮೀಲಾಗಿ, ಕ್ಲೇಮುದಾರನು ಸುಳ್ಳು ದೂರನ್ನು ದಾಖಲಿಸಿರುತ್ತಾನೆ.ನ್ಯಾಯಾಧಿಕರಣವು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಯುಕ್ತವಾಗಿ ವಿವೇಚಿಸಿರುವುದಿಲ್ಲ.ಗಾಯಗಳು ಅಪಘಾತದಿಂದ ಉಂಟಾಗಿದ್ದವು ಎಂಬ ಬಗ್ಗೆ ಆತನಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರಿಗೂ ಸಹ ಸಹ ತಾನು ತಾನು ಮಾಹಿತಿ ನೀಡಿರಲಿಲ್ಲವೆಂಬುದನ್ನು ತನ್ನ ಪಾಟಿ ಸವಾಲಿನಲ್ಲಿ ಪಿ.ಡಬ್ಲ್ಯು .1 ಕ್ಲೇಮುದಾರನು ಒಪ್ಪಿಕೊಂಡಿರುತ್ತಾನೆ.ಆದ್ದರಿಂದ, ಕ್ಲೇಮು ಅರ್ಜಿಯನ್ನು ವಜಾಗೊಳಿಸಬೇಕಾದ ಅವಶ್ಯಕತೆಯಿರುತ್ತದೆ ಎಂದು ವಾದಿಸಿರುತ್ತಾರೆ.ಮುಂದುವರೆಸುತ್ತಾ, ಮಾನ್ಯ ನ್ಯಾಯವಾದಿಗಳು, ಪರಿಹಾರದ ಪ್ರಮಾಣವೂ ಕೂಡ ಹೆಚ್ಚಿನದಾಗಿರುತ್ತದೆಂದೂ, ಅಲ್ಲದೆ ವಾಹನದ ಚಾಲಕನು ಸಿಂಧುವಾದ ಚಾಲನಾ ಪರವಾನಗಿಯನ್ನು ಹೊಂದಿರುವುದಿಲ್ಲ; ಅಲ್ಲದೆ, ಆತನು ಲಘು ಮೋಟಾರು ವಾಹನ, (ಎಲ್ಎಂವಿ) (ಸಾಗಣೇತರ) ವಾಹನದ ಪರವಾನಗಿಯನ್ನು ಮಾತ್ರ ಹೊಂದಿದ್ದು, ಪ್ರಶ್ನಿತ ವಾಹನವು ಸಾರಿಗೆ ವಾಹನವಾಗಿರುತ್ತದಾದ್ದರಿಂದ, ಇದು ವಿಮಾ ಷರತ್ತುಗಳಿಗೆ ವಿರುದ್ಧವಾಗಿರುತ್ತವೆಂದೂ; ಆದ್ದರಿಂದ, ವಿಮಾದಾರ ಕಂಪನಿಯ ಮೇಲೆ ಯಾವುದೇ ಹೊಣೆಗಾರಿಕೆಯನ್ನು ವಿಧಿಸಬಾರದು ಎಂದು ವಾದಿಸಿರುತ್ತಾರೆ.ಅಲ್ಲದೆ, ವಾಹನದ ಕ್ಷಮತೆ ಕೂಡ ಸಮಯ ಮೀರಿದ್ದು, ಆ ಮೂಲಕ ವಿಮೆಯ ನಿಬಂಧನೆ ಹಾಗೂ ಷರತ್ತುಗಳನ್ನು 2 ನೇ ಪ್ರತ್ಯರ್ಜಿದಾರನು ಉಲ್ಲಂಘಿಸಿರುತ್ತಾನೆ.ಹಾಗಾಗಿ, ಅಪೀಲನ್ನು ಪುರಸ್ಕರಿಸಲು ಹಾಗೂ ಪರಿಹಾರದ ಪ್ರಮಾಣವನ್ನು ಕಡಿಮೆ ಮಾಡಲು ಕೋರಿರುತ್ತಾರೆ.

12. ಅದಕ್ಕೆ ವಿರುದ್ಧವಾಗಿ, ಕ್ಲೇಮುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ಹೊಣೆಗಾರಿಕೆಯನ್ನು ಹೊರಿಸುವ ಸಂಬಂಧದಲ್ಲಿ ನ್ಯಾಯಧಿಕರಣದ ನಿರ್ಣಯಗಳನ್ನು ಬೆಂಬಲಿಸಿ, ಫಿರ್ಯಾದನ್ನು ಸಲ್ಲಿಸುವಲ್ಲಿ ವಿಳಂಬವಾಗಿದ್ದಾಗ್ಯೂ, ಆ ವಿಳಂಬಕ್ಕೆ ಕಾರಣವನ್ನು ಕ್ಲೇಮುದಾರನು ಮನವರಿಕೆಯಾಗುವಂತೆ ವಿವರಿಸಿರುತ್ತಾನೆಂದು; ಈತ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರವೂ ಕೂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ನಿರಂತರವಾಗಿ ಚಿಕಿತ್ಸೆ ಪಡೆದಿರುತ್ತಾನೆ; ಪೊಲೀಸರಿಗೆ ವೈದ್ಯಕೀಯ ವರದಿಯನ್ನು ಕಳುಹಿಸುವ ಮೂಲಕ ಪೊಲೀಸರಿಗೆ ಮಾಹಿತಿ ನೀಡುವುದು ವೈದ್ಯರ ಕರ್ತವ್ಯವಾಗಿರುತ್ತದಾದರೂ, ಆಸ್ಪತ್ರೆಯು ಅದನ್ನು ಮಾಡಿರುವುದಿಲ್ಲ; ಆಸ್ಪತ್ರೆಯ ವೈದ್ಯರು ಎಸಗಿದ ತಪ್ಪಿಗಾಗಿ, ಅರ್ಜಿದಾರರ ಕ್ಲೇಮನ್ನು ತಿರಸ್ಕರಿಸಲಾಗುವುದಿಲ್ಲ.ದೂರನ್ನು ಸಲ್ಲಿಸುವಲ್ಲಿ ಅದ ವಿಳಂಬ ಮಾತ್ರದಿಂದಲೇ ಅದು ಅರ್ಜಿದಾರರಿಗೆ ಬಾಧಕವಾಗಿರುವುದಿಲ್ಲ; ಚಾಲಕ ಹಾಗೂ ಮಾಲೀಕರುಗಳು ಸ್ವತಃ ತಮ್ಮ ಕಡೆಯಿಂದಾದ ನಿರ್ಲಕ್ಷ್ಯವನ್ನು ನಿರಾಕರಿಸುವ ಮೂಲಕ ಅಪಘಾತವನ್ನು ಒಪ್ಪಿಕೊಂಡಿರುತ್ತಾರೆ; ನಿಶಾನೆ.ಪಿ .6

ರಲ್ಲಿನ ಗಾಯದ ಪ್ರಮಾಣಪತ್ರವು, ಅವನು ರಸ್ತೆ ಅಪಘಾತದಲ್ಲಿ ಗಾಯಗೊಂಡನೆಂಬುದನ್ನು ಬಹಿರಂಗಪಡಿಸುತ್ತದೆ; ಸದರಿ ದಸ್ತಾವೇಜುಗಳು ವಿವಾದಾತೀತ ಸಮಯದಲ್ಲಾದಂಥ ಅಪಘಾತವನ್ನು ಸೂಚಿಸುತ್ತವೆ; ವಿಮಾದಾರನು ದೂರನ್ನು ಸಲ್ಲಿಸುವುದಕ್ಕೆ ಮೊದಲು, ವಾಹನವು ಅರ್ಹತಾ ಪ್ರಮಾಣಪತ್ರವನ್ನು ಹೊಂದಿದ್ದರೂ ಅದು ಅಸಿಂಧುವಾಗಿರುತ್ತದೆ; ಅದಿಲ್ಲದಿದ್ದರೂ, 15 ವರ್ಷಗಳಿಗಿಂತ ಕಡಿಮೆ ಅವಧಿಯ ವಾಹನಗಳಿಗೆ ಕ್ಷಮತೆ ಪ್ರಮಾಣಪತ್ರದ ಅಗತ್ಯವಿರುವುದಿಲ್ಲ.ಹಾಗಾಗಿ, ಅಪೀಲನ್ನು ವಜಾಗೊಳಿಸುವಂತೆ ವಿಮಾದಾರ ಕಂಪನಿಯು ಕೋರಿರುತ್ತದೆ ಎಂದು ವಾದಿಸಿರುತ್ತಾರೆ.ಮುಂದುವರೆದು, ಇವರು, ಪರಿಹಾರವನ್ನು ಹೆಚ್ಚಿಸುವ ಸಂಬಂಧದಲ್ಲಿ ವಾದಿಸುತ್ತಾ, ಕ್ಲೇಮುದಾರನು ದಿನಕ್ಕೆ 400/- ರೂಪಾಯಿಗಳಷ್ಟು ಹಣ ಗಳಿಸುತ್ತಿದ್ದನಾದರೂ, ನ್ಯಾಯಾಧಿಕರಣ ತಿಂಗಳಿಗೆ 5,000/-ರೂಪಾಯಿಗಳನ್ನು ಮಾತ್ರ ಪರಿಗಣಿಸಿರುವುದು ತೀರಾ ಅಲ್ಪ ಮೊತ್ತವಾಗಿರುತ್ತದೆ.ಲೋಕ್ ಅದಾಲತ್ನಲ್ಲಿಯೂ ಕೂಡ, ಅಕುಶಲ ಕಾರ್ಮಿಕರಿಗೆ ಸ ಂ ಬ ಂ ಧಿಸಿದ ಂ ತೆ 7,000/- ರೂ.ಗಳ ಕಾಲ್ಪನಿಕ ಆದಾಯವನ್ನು ಪರಿಗಣಿಸಲಾಗಿರುತ್ತದೆ.ನ್ಯಾಯಾಧಿಕರಣವು, ಪರಿಗಣಿಸಿರುವ ಅಂಗವೈಕಲ್ಯದ ಶೇಕಡಾವಾರು ಪ್ರಮಾಣವೂ ಅತ್ಯಲ್ಪ ಮಟ್ಟದ್ದಾಗಿದ್ದು, ಸಾಂಪ್ರದಾಯಿಕ ಶೀರ್ಷಿಕೆಗಳಡಿಯಲ್ಲಿ ಯುಕ್ತವಾದ ಪರಿಹಾರವಾಗಿಲ್ಲ ಹಾಗೂ ಹಾಸಿಗೆ ಹಿಡಿದಿದ್ದ ಅವಧಿಯ ಸಂಬಂಧದಲ್ಲಿ ಯಾವುದೇ ಮೊಬಲಗನ್ನು ನೀಡಿರುವುದಿಲ್ಲ ಎಂದು ವಾದಿಸಿರುತ್ತಾರೆ.ಹಾಗಾಗಿ, ಪರಿಹಾರದ ಹೆಚ್ಚಳಕ್ಕಾಗಿ ಕೋರಿರುತ್ತಾರೆ.

13. ಎರಡೂ ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ತರುವಾಯ, ನನ್ನ ಪರಿಗಣನೆಗಾಗಿ ಉದ್ಭವಿಸಿದ ಅಂಶಗಳು ಈ ಮುಂದಿನಂತಿವೆ:

(ಎ) ಮಧ್ಯಸ್ಥಿಕೆಯನ್ನು ಕೋರಿರುವ ವಿಮಾದಾರ ಕಂಪನಿಯ ಮೇಲೆ ಹೊಣೆಗಾರಿಕೆಯನ್ನು ವಿಧಿಸಿರುವ ನ್ಯಾಯಾಧಿಕರಣದ ಕ್ರಮವು ಸಮರ್ಥನೀಯವಲ್ಲವೇ?

(ಬಿ) ಕೈಮುದಾರರು, ಪರಿಹಾರವನ್ನು ಹೆಚ್ಚಿಸಲು ಹ ಕ್ಕುಳ್ಳವರಾಗಿರುತ್ತಾರೆಯೇ ಅಥವಾ ಪರಿಹಾರವನ್ನು ಕಡಿತಗೊಳಿಸುವುದು ಅಗತ್ಯವೇ?

ಇದಕ್ಕೆ ಸಂಬಂಧಿಸಿದಂತೆ ಇರುವ ಆದೇಶ ಯಾವುದು?

14. ನ್ಯಾಯಾಧಿಕರಣದ ಮುಂದೆ ಕ್ಲೇಮುದಾರರು ಮಾಡಿರುವ ವಾದ ಹೀಗಿದೆ:ದಿನಾಂಕ: 20.06.2013 ರಂದು 2 ನೇ ಪ್ರತ್ಯರ್ಜಿದಾರನು ರಸಗೊಬ್ಬರನ್ನು ತುಂಬುವ ಹಾಗೂ ಇಳಿಸುವ ಕಾರ್ಯಕ್ಕೆ ಕ್ಲೇಮುದಾರನನ್ನು ನೇಮಿಸಿದ್ದು, ರಾತ್ರಿ ಸುಮಾರು 7.30 ರ ವೇಳೆಯಲ್ಲಿ ವೀರನಗೌಡ ಎಂಬುವವರ ಜಮೀನಿನಲ್ಲಿ ರಸಗೊಬ್ಬರವನ್ನು ಇಳಿಸಿದ ತರುವಾಯ, ಕೆಎ -34/ಟಿ -8796 ಹಾಗೂ 8797 ನೋಂದಣಿ ಸಂಖ್ಯೆಯನ್ನು ಹೊಂದಿರುವ ಟ್ರ್ಯಾಕ್ಟರ್-ಟ್ರೇಲರ್ನಲ್ಲಿ ಹಿಂತಿರುಗುತ್ತಿರುವಾಗ, ಬೈಲೂರು ಗ್ರಾಮದ ಚಾನಲ್ ಕ್ರಾಸ್ನ ಈರಣ್ಣ ದೇವಸ್ಥಾನದ ಬಳಿ ಅತಿ ವೇಗ ಹಾಗೂ ನಿರ್ಲಕ್ಷ್ಯತನದ ಚಾಲನೆ ಮಾಡುತ್ತಿದ್ದ ಕಾರಣ ನಿಯಂತ್ರಣ ತಪ್ಪಿ ಟ್ರ್ಯಾಕ್ಟರ್ -ಟ್ರೇಲರ್ ಮೊಗಚಿ ಬಿದ್ದು ಅರ್ಜಿದಾರನಿಗೆ ಗಾಯಗಳುಂಟಾದವು.ಕೂಡಲೇ, ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಈತನನ್ನು ಕರೆದೊಯ್ದು, ದಿನಾಂಕ 21.06.2013 ರಿಂದ 12.07.2013 ರವರೆಗೆ ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಿಸಲಾಗಿರುತ್ತದೆ.ಆದ್ದರಿಂದ, ಅವನಿಗೆ ದೂರು ದಾಖಲಿಸಲು ಸಾಧ್ಯವಾಗದೆ ಆಸ್ಪತ್ರೆಯಿಂದ ಬಿಡುಗಡೆಯಾದ ತರುವಾಯ ದೂರನ್ನು ದಾಖಲಿಸಿರುತ್ತಾನೆ.ಇವನ ವಾದಕ್ಕೆ ಪೂರಕವಾಗಿ,

ಸ್ವತಃ ಆತ ಪಿ.ಡಬ್ಲ್ಯು.ಎಂದು ವಿಚಾರಣೆಗೊಳಗಾಗಿದ್ದಾನೆ.ಪ್ರಥಮ ಮಾಹಿತಿ ವರದಿಯ ಪ್ರತಿಯನ್ನು ನಿಶಾನೆ ಪಿ .1 ಎಂದು, ದೂರಿನ ಪ್ರತಿಯನ್ನು ನಿಶಾನೆ ಪಿ .2 ಎಂದು, ನಂತರದ ಹೇಳಿಕೆಯನ್ನು ನಿಶಾನೆ ಪಿ .3 ಎಂದು ವಾಹನದ ಚಾಲಕನ ವಿರುದ್ಧ ಪೊಲೀಸರು ಸಲ್ಲಿಸಿದ ಅಂತಿಮ ವರದಿಯನ್ನು ನಿಶಾನೆ ಪಿ .4 ಎಂದು, ಗುರುತು ಮಾಡಲಾಗಿರುತ್ತದೆ.ಹಾಗೆಯೇ, ನಿಶಾನೆ ಪಿ .5 ಸ್ಥಳ ಮಹಜರ್, ನಿಶಾನೆ ಪಿ .6 ಗಾಯ ಪ್ರಮಾಣಪತ್ರ, ನಿಶಾನೆ ಪಿ .7, ಐಎಂಬಿ ವರದಿ, ನಿಶಾನೆ ಪಿ .8, ಅಂಗವೈಕಲ್ಯ ಪ್ರಮಾಣಪತ್ರ, ನಿಶಾನೆ ಪಿ .9 ರಿಂದ ಪಿ .30 ರವರೆಗಿನ ವೈದ್ಯಕೀಯ ಬಿಲ್ಲುಗಳು ಹಾಗೂ ಔಷಧ ಚೀಟಿಗಳು, ನಿಶಾನೆ ಪಿ .31 ಬಿಡುಗಡೆ ಪ್ರಮಾಣಪತ್ರ ಹಾಗೂ ನಿಶಾನೆ ಪಿ .32 ಎಕ್ಸ್‌ರೇಗಳಾಗಿರುತ್ತವೆ.

15. ಪಿ.ಡಬ್ಲ್ಯು.ಕ್ಷೇಮುದಾರನು, ಅಫಿಡಾವಿಟ್ಟಿನ ಮೂಲಕ ಸಲ್ಲಿಸಿದ ತನ್ನ ಸಾಕ್ಷ್ಯದಲ್ಲಿನ ದೃಢಕ್ತಿಗಳನ್ನು ಪುನರುಚ್ಚರಿಸಿರುತ್ತಾನೆ.ಪೊಲೀಸು ದಸ್ತಾವೇಜುಗಳಿಂದ ನಿಶಾನೆ.ಪಿ .1, ಗಾಯಗೊಂಡ ಕೋಮುದಾರನುದಿನಾಂಕ: 20.07.2013 ರಂದು ದೂರನ್ನು ದಾಖಲಿಸಿರುತ್ತಾನೆಂಬುದನ್ನು ತೋರಿಸುತ್ತದೆ.ಒಪ್ಪಿಕೊಂಡಂತೆ,ದಿನಾಂಕ: 20.06.2013 ರಂದು ಆಪಾದಿತ ಅಪಘಾತವು ಸಂಭವಿಸಿರುತ್ತದೆ ಹಾಗೂ ದೂರನ್ನು ದಾಖಲಿಸುವಲ್ಲಿ 30 ದಿನಗಳ ವಿಳಂಬವುಂಟಾಗಿದ್ದು, ಇದು ಸುಳ್ಳು ದೂರಾಗಿರುವುದರಿಂದ ವಿಮಾದಾರನು ಸದರಿ ವಿಷಯವನ್ನು ಗಂಭೀರವಾಗಿ ಆಕ್ಷೇಪಿಸಿರುತ್ತಾನೆ.ನಿಶಾನೆ ಪಿ .2 ಕೇಮುದಾರನು ದಾಖಲಿಸಿದ ದೂರಾಗಿದ್ದು, ಅದರಲ್ಲಿ ವಾಹನದ ವಿವರಗಳನ್ನು, ಅಪಘಾತವಾದ ಕೂಡಲೇ ಆಸ್ಪತ್ರೆಗೆ ದಾಖಲಾಗಿರುವ ವಿವರಗಳನ್ನು ನೀಡಿದ್ದಾನೆ.ಈತನಿಗೆ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯಬೇಕೆಂಬ ಇರಾದೆಯಿತ್ತಾದರೂ, ಯಾರೊಬ್ಬರು ಈತನ ಬಗ್ಗೆ ಕಾಳಜಿ ವಹಿಸಿರುವುದಿಲ್ಲ.ಆದ್ದರಿಂದ, ಆತ ಬಳ್ಳಾರಿಯಲ್ಲಿನ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಪಡೆದಿರುತ್ತಾನೆ.ನಿಶಾನೆ ಪಿ.ಡಿರಲ್ಲಿನ ನಂತರದ ಹೇಳಿಕೆಯನ್ನು ಪೊಲೀಸರ ಸಮ್ಮುಖದಲ್ಲಿ ನೀಡಿರುತ್ತಾನೆ.ಆ ತರುವಾಯ ಪೊಲೀಸರು ಪ್ರಕರಣವನ್ನು ತನಿಖೆ ಮಾಡಿ, ಪ್ರಶ್ನಿತ ವಾಹನವನ್ನು ಅಭಿಗ್ರಹಿಸಿ, ನಿಶಾನೆ ಪಿ .7 ಎಂದು ಐಎಂಬಿ ವರದಿಯನ್ನು ಸ್ವೀಕರಿಸಿರುತ್ತಾರೆ.ನಿಶಾನೆ ಪಿ .6 ರ ಮೇರೆಗಿನ ವೈದ್ಯಕೀಯ ದಸ್ತಾವೇಜುಗಳು ಹಾಗೂ ಸ್ವೀಕೃತಿಗಳು, ಗಾಯ ಪ್ರಮಾಣಪತ್ರಗಳು ಮೂರು ಗಾಯಗಳಾಗಿರುವುದನ್ನು ತೋರಿಸುತ್ತಿವೆ.ಗಾಯಸಂಖ್ಯೆ: 3 ಮೂಳೆ ಮುರಿತದ ಗಾಯವಾಗಿದ್ದು ಗಂಭೀರ ಸ್ವರೂಪದ್ದಾಗಿರುತ್ತದೆ.ಪ್ರತ್ಯರ್ಜಿದಾರ-ವಿಮಾದಾರರು ಅಪಘಾತದ ಬಗೆಗೆ ಒಂದೇ ಒಂದು ಮಾತನ್ನೂ ಆಡದೆ, ದೂರನ್ನು ತುಂಬಾ ವಿಳಂಬವಾಗಿ ಸಲ್ಲಿಸಿ, ಆ ಮೂಲಕ ಕಟ್ಟು ಕತೆ ಕಟ್ಟಿರುತ್ತಾರೆಂದು ವಾದಿಸಿದ್ದರೂ, ನಿಶಾನೆ ಪಿ .6 ಗಾಯ ಪ್ರಮಾಣ ಪತ್ರವು ಗಾಯಾಳುವನ್ನುದಿನಾಂಕ: 20.6.2013 ರಂದು ರಾತ್ರಿ ಸುಮಾರು 7.00 ಗಂಟೆಗೆ ರಸ್ತೆ ಸಂಚಾರಿ ಅಪಘಾತದಲ್ಲಿನ ಗಾಯಗಳ ಹಿನ್ನೆಲೆಯೊಂದಿಗೆ ಆಸ್ಪತ್ರೆಗೆ ಕರೆತರಲಾಗಿತ್ತು ಮತ್ತುದಿನಾಂಕ: 20.06.2013 ರಂದು ರಾತ್ರಿ 10.30 ಗಂಟೆಗೆ ತಪಾಸಣೆ ಆರಂಭಿಸಲಾಗಿರುತ್ತದೆಂಬುದನ್ನು ತೋರಿಸುತ್ತದೆ.ಕ್ಷೇಮುದಾರನನ್ನು ಆಸ್ಪತ್ರೆಗೆ ಕರೆತಂದ ದಿನವೇ, ಅಂದರೆದಿನಾಂಕ: 20.06.2013 ರಂದೇ ವೈದ್ಯರು ಅವರನ್ನು ತಪಾಸಣೆ ಮಾಡಿರುತ್ತಾರೆ.ಗಾಯಗಳ ಸ್ವರೂಪವನ್ನು ತಿಳಿದುಕೊಳ್ಳುವ ದೃಷ್ಟಿಯಿಂದ,ದಿನಾಂಕ: 21.06.2013 ರಂದು ಎಕ್ಸ್‌ರೇಯನ್ನು ತೆಗೆಯಲಾಗಿರುತ್ತದೆ.ಇದರಿಂದ ಮುಂದೋಳಿನ ಒಳ ಎಲುಬು ಮುರಿದಿರುವುದು ಕಂಡು ಬಂದಿದ್ದು, ಅದನ್ನೇ ಗಾಯದ ಪ್ರಮಾಣಪತ್ರದಲ್ಲೂ ಉಲ್ಲೇಖಿಸಲಾಗಿರುತ್ತದೆ.ಬಿಡುಗಡೆ ಪ್ರಮಾಣಪತ್ರವಾದ ನಿಶಾನೆ.ಪಿ. 31 9, ಕ್ಷೇಮುದಾರನುದಿನಾಂಕ: 21.06.2013 ರಂದು ಆಸ್ಪತ್ರೆಗೆ ದಾಖಲಾಗಿ,ದಿನಾಂಕ: 02.07.2013 ರಂದು ಬಿಡುಗಡೆಯಾಗಿರುತ್ತಾನೆಂಬುದನ್ನು ಬಹಿರಂಗಪಡಿಸುತ್ತದೆ.ನಿಶಾನೆ ಪಿ .6 ರೊಂದಿಗೆ ನಿಶಾನೆ ಪಿ .31 ಅಪಘಾತವು ನಡೆದ ಅದೇ ದಿನದಂದು

ಕ್ಷೇಮುದಾರನನ್ನು ಆಸ್ಪತ್ರೆಗೆ ದಾಖಲಿಸಿಕೊ ಂ ಡು ಎಕ್ಸ್-ರೇಯನು ಅದೇ ದಿನ ತೆಗೆಯಲಾಗಿರುತ್ತದೆಂಬುದನ್ನು ಬಹಿರಂಗಪಡಿಸುತ್ತದೆ.ಆದರೆ, ತರುವಾಯ,ದಿನಾಂಕ: 21.06.2013 ರಂದು ಒಳರೋಗಿಯಾಗಿ ಆಸ್ಪತ್ರೆಗೆ ದಾಖಲಿಸಲಾಗಿರುತ್ತಾನೆ.ದಿನಾಂಕ: 30.06.2013 ರಂದಿನ ತಪಾಸಣೆಯ ಸಮಯ ರಾತ್ರಿ 10.30 ಆಗಿರುತ್ತದೆ.ಆತನನ್ನು ಒಳರೋಗಿಯಾಗಿ ಆಸ್ಪತ್ರೆಗೆ ದಾಖಲಿಸಿಕೊಳ್ಳುವಾಗ, ಬಹುಶಃ ಮಧ್ಯರಾತ್ರಿ 12.00 ಗಂಟೆಯಾಗಿರಬಹುದಾದುದರಿಂದ, ಅದು ಮುಂದಿನ ದಿನದಂತೆ ತೋರುತ್ತಿರಬಹುದು.ಆದ್ದರಿಂದ, ಕೇಮುದಾರನು ಆಸ್ಪತ್ರೆಗೆ ಅದೇ ದಿನ ದಾಖಲಾಗಿರುವುದಿಲ್ಲವೆಂಬ ವಿಮಾದಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ನಿಶಾನೆ ಪಿ .6 ಹಾಗೂ ಪಿ .31 ನ್ನು ಒಟ್ಟಿಗೆ ಓದಿದಾಗ, ಅವು ಅಪಘಾತ ಸಂಭವಿಸಿದ ತರುವಾಯ ಆತನನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತೆಂಬುದನ್ನು ತೋರಿಸುತ್ತವೆ.ಗಾಯ ಪ್ರಮಾಣ ಪತ್ರದಲ್ಲೂ ಸಹ ಈ ಬಗ್ಗೆ ಉಲ್ಲೇಖಿಸಲಾಗಿದೆ.ಕ್ಷೇಮುದಾರನಿಗೆ ರಾತ್ರಿ 7.00 ಗಂಟೆಯಲ್ಲಿ ಸಂಭವಿಸಿದ ರಸ್ತೆ ಅಪಘಾತದಿಂದ ಗಾಯಗಳುಂಟಾಗಿರುತ್ತವೆ.ಆದ್ದರಿಂದ, ಕೇಮುದಾರನು ಗಾಯಗೊಂಡದ್ದನ್ನೂ ಹಾಗೂ ಆಸ್ಪತ್ರೆಗೆ ದಾಖಲಾಗಿರುವ ಸಂಗತಿಯನ್ನೂ ಆತನು ರುಜುವಾತುಪಡಿಸಿರುತ್ತಾನೆ.

16. ದೂರನ್ನು ದಾಖಲಿಸುವಲ್ಲಿ ಆದ ವಿಳಂಬದ ಸಂಬಂಧದಲ್ಲಿ ವಿಮಾದಾರರ ಪರ ಮಾನ್ಯ ನ್ಯಾಯವಾದಿಗಳು ಸಲ್ಲಿಸಿದ ವಾದಗಳಿಗೆ ಪ್ರತಿಯಾಗಿ ಕ್ಷೇಮುದಾರನ ಪರ ಮಾನ್ಯ ನ್ಯಾಯವಾದಿಯು, ದೂರನ್ನು ಸಲ್ಲಿಸುವಲ್ಲಿ ಆದ ವಿಳಂಬ ಮಾತ್ರದಿಂದಲೇ ಅದು ಕ್ಷೇಮುದಾರನ ವಾದಕ್ಕೆ ಬಾಧಕವಾಗಿರುವುದಿಲ್ಲವೆಂದು ಪ್ರತಿವಾದಿಸಿರುತ್ತಾರೆ.ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ಸಾಕಷ್ಟು ತೀರ್ಪುಗಳ ಮೂಲಕ ಗಾಯಗೊಂಡ ಕ್ಷೇಮುದಾರನಿಗೆ ಚಿಕಿತ್ಸೆ ಒದಗಿಸುವುದು ದೂರು ದಾಖಲಿಸುವುದಕ್ಕಿಂತ ಬಹುಮುಖ್ಯ ಆದ್ಯತೆಯಾಗಬೇಕೆಂದು ಅಭಿಪ್ರಾಯಪಟ್ಟಿರುತ್ತದೆ.ವೈದ್ಯರು ಅಪಘಾತದ ಬಗ್ಗೆ ಪೊಲೀಸರಿಗೆ ತಿಳಿಸದಿರುವುದರಿಂದ, ಅವರ ಕಡೆಯಿಂದ ಪ್ರಮಾದವಾಗಿದ್ದರೂ ಕೂಡ, ನಿಶಾನೆ ಪಿ .31 ರ ಪ್ರಕಾರ ಕ್ಷೇಮುದಾರನುದಿನಾಂಕ: 02.07.2013 ರಂದು ಆಸ್ಪತ್ರೆಯಿಂದ ಬಿಡುಗಡೆಗೊಂಡಿರುತ್ತಾನೆಂಬುದು ಹಾಗೂದಿನಾಂಕ: 20.07.2013 ರಂದು ಆತನು ದೂರನ್ನು ದಾಖಲಿಸಿದ್ದಾನೆಂದು ಕಂಡುಬಂದರೂ, ಈ ಪ್ರಕರಣದಲ್ಲಿ ಕ್ಷೇಮುದಾರನ ಕಡೆಯಿಂದ ಯಾವುದೇ ತಪ್ಪು ಆಗಿರುವುದಿಲ್ಲ.ಪ್ರಾ.ಸಾ .1 ತನಗೆ ಅಪಘಾತದಲ್ಲಿ ಗಾಯಗಳು ಉಂಟಾದವೆಂಬುದನ್ನು ತಾನು ವೈದ್ಯರಿಗೆ ಹೇಳಿರುವುದಿಲ್ಲವೆಂದು ವಿಮಾ ಕಂಪನಿಯ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿದ್ದಾಗ್ಯೂ, ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯದ ರೂಪದಲ್ಲಿ ಮಂಡಿಸಿದಂಥ ದಾಖಲೆಯಲ್ಲಿರುವ ಒಟ್ಟಾರೆ ಸಾಕ್ಷ್ಯಾಧಾರಗಳ ಬಲವಾದ ಮಂಡನೆಯನ್ನು ತಳ್ಳಿಹಾಕಲಾಗುವುದಿಲ್ಲ.ಈ ಸಂಬಂಧದಲ್ಲಿ, ಕ್ಷೇಮುದಾರರ ಪರ ಮಾನ್ಯ ವಕೀಲರು, ರವಿ -ವಿರುದ್ಧ-ಬದ್ರಿ ನಾರಾಯಣ್ ಹಾಗೂ ಇತರರು 1 ' ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಚ ಉದಾಹರಿಸಿದ್ದು, ಇದರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಪಘಾತವಾದ ಚ ತರುವಾಯ ದೂರನ್ನು ದಾಖಲಿಸುವಲ್ಲಿ ಮೂರು ತಿಂಗಳುಗಳ ಕಾಲ ವಿಳಂಬವಾಗಿದ್ದಾಗ್ಯೂ, ಆ ವಿಳಂಬವ ಕ್ಷೇಮುದಾರರ ವಾದಕ್ಕೆ ಯಾವುದೇ ರೀತಿಯಲ್ಲೂ ಪ್ರತಿಕೂಲವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯದ 20 ನೇ ಹಾಗೂ 21 ನೇ ಪ್ಯಾರಾಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ:

"20. ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವಲ್ಲಿ ಆಗುವ ವಿಳ ಂ ಬವು ಕ್ಲೈಮುದಾರರ ವಾದವನ್ನು ಸ ಂ ದೇಹಿಸಲು ಆಧಾರವಾಗಿರುವುದಿಲ್ಲ.ಭಾರತೀಯರು ಇರುವ ಸ್ಥಿತಿಗತಿಯನ್ನು ತಿಳಿದೂ ತಿಳಿದು, ಒಬ್ಬ ಸಾಮಾನ್ಯ

ವ್ಯಕ್ತಿಯು ಅಪಘಾತ ಸಂಭವಿಸಿದ ಬ ತರುವಾಯ ಕೂಡಲೇ ಪೊಲೀಸ್ ಠಾಣೆಗೆ ಧಾವಿಸಿ ಬಂದು ದೂರು ಸಲ್ಲಿಸುತ್ತಾನೆಂದು ನಿರೀಕ್ಷಿಸಲಾಗುವುದಿಲ್ಲ.ಮನುಷ್ಯ ಸಹಜ ಸ್ವಭಾವ ಹಾಗೂ ಕೌಟುಂಬಿಕ ಹೊಣೆಗಾರಿಕೆಗಳು ತೊಂದರೆಗೊಳಗಾದ ವ್ಯಕ್ತಿಯನ್ನು ರಕ್ತ ಸಂಬಂಧಿಗಳು ಮೊದಲು ಆಸ್ಪತ್ರೆಗೆ ಕರೆದೊಯ್ಯಬೇಕೆಂಬ ಮಟ್ಟಿಗೆ ಯೋಚಿಸುವಂತೆ ಮಾಡುತ್ತವೆಯೇ ಹೊರತು ಪೊಲೀಸ್ ಠಾಣೆಗಲ್ಲ.ಇಂಥ ಸಂದರ್ಭಗಳಲ್ಲಿ ಅವರನ್ನು ಪೊಲೀಸ್ ಠಾಣೆಗಳಲ್ಲಿ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಲು ಶೀಘ್ರವಾಗಿ ಧಾವಿಸಿ ಯಾಂತ್ರಿಕವಾಗಿ ವರ್ತಿಸಬೇಕೆ ಂ ದು ನಿರೀಕ್ಷಿಸಲಾಗುವುದಿಲ್ಲ.ಹಾಗಾಗಿ ಪ್ರಥಮ ಮಾಹಿತಿ ವರದಿ ದಾಖಲಿಸುವಲ್ಲಿನ ವಿಳಂಬವು ಸಂತ್ರಸ್ಥರಿಗೆ ನ್ಯಾಯವನ್ನು ನಿರಾಕರಿಸಲು ಆಧಾರವಾಗುವುದಿಲ್ಲ.ವಿಳಂಬವುಂಟಾದ ಸಂದರ್ಭಗಳಲ್ಲಿ, ನ್ಯಾಯಾಲಯಗಳು ಸೂಕ್ಷ್ಮ ಎ ಪರಿಶೀಲನೆಯೊಂದಿಗೆ ಸಾಕ್ಷ್ಯವನ್ನು ಪರಿಶೀಲಿಸುವುದು ಅಗತ್ಯ.ಹಾಗೆ ಮಾಡುವಾಗ, ಪ್ರಥಮ ಮಾಹಿತಿ ವರದಿಯಲ್ಲಿನ ಅಂಶಗಳನ್ನು ಮತ್ತಷ್ಟು ಜಾಗರೂಕತೆಯಿಂದ ಪರಿಶೀಲಿಸಬೇಕಾಗಿರುತ್ತದೆ.ದಾಖಲೆಗಳನ್ನು ಸೃಷ್ಟಿಸಿರುವ ಬಗ್ಗೆ ಯಾವುದೇ ಸೂಚನೆಗಳಿಲ್ಲವೆಂದು ಅಥವಾ ಮುಗ್ಧ ವ್ಯಕ್ತಿಗಳನ್ನು ಸಿಕ್ಕಿಸಲು ಸೃಷ್ಟಿಸಲಾಗಿದೆ ಅಥವಾ ಚಾತುರ್ಯತೆಯಿ ಂ ದ ರೂಪಿಸಲಾಗಿದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ, ಪ್ರಥಮ ಮಾಹಿತಿ ವರದಿ ದಾಖಲಿಸುವಲ್ಲಿ ವಿಳಂಬವಾದರೂ ಕೂಡ, ಕ್ಲೇಮು ಪ್ರಕರಣವನ್ನು ವಿಳಂಬವಾದ ಕಾರಣಕ್ಕಾಗಿ ಮಾತ್ರಕ್ಕಾಗಿಯೇ ವಜಾಗೊಳಿಸುವಂತಿಲ್ಲ.

21. ಇಂಥ ರೀತಿಯ ಪ್ರಕರಣಗಳಲ್ಲಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವ ಉದ್ದೇಶವು, ಕ್ರಿಮಿನಲ್ ಅಪರಾಧಗಳ ತನಿಖೆಯನ್ನು ಆರ ಂ ಭಿಸಲು ಪೊಲೀಸರಿಗೆ ಆರಂಭದಲ್ಲಿಯೇ ಮಾಹಿತಿ ನೀಡುವುದಾಗಿರುತ್ತದೆ.ಪ್ರಥಮ ಮಾಹಿತಿ ವರದಿಯ ಸಲ್ಲಿಸುವಿಕೆಯಿಂದ ಖಂಡಿತವಾಗಿಯೂ ಸಂತ್ರಸ್ಥ ವ್ಯಕ್ತಿಯು ಪರಿಹಾರಕ್ಕಾಗಿ ಪ್ರಕರಣವನ್ನು ದಾಖಲಿಸಲು ಸಾಧ್ಯವಾಗುವ ಹಾಗೆ ಅಪಘಾತದ ಸಂಗತಿಯನ್ನು ರುಜುವಾತುಪಡಿಸುವುದಾಗಿರುತ್ತಾದಾದರೂ, ಹಾಗೆ ಮಾಡುವಲ್ಲಿ ಆಗುವ ವಿಳಂಬವು ಕ್ಲೇಮು ಅರ್ಜಿಗಳನ್ನು ತಿರಸ್ಕರಿಸಲು ಮುಖ್ಯ ಆಧಾರವಾಗುವುದಿಲ್ಲ.ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಪ್ರಥಮ ಮಾಹಿತಿ ವರದಿ ದಾಖಲಿಸುವಿಕೆಯು, ಮೋಟಾರು ಅಪಘಾತ ಕ್ಲೇಮು ಪ್ರಕರಣಗಳನ್ನು ನಿರ್ಧರಿಸುವಲ್ಲಿ ನಿರ್ಣಾಯಕವಾಗಿದ್ದಾಗ್ಯೂ, ಕ್ಲೇಮುದಾರರು ಇದಕ್ಕಾಗಿ ಮನವರಿಕೆಯಾಗುವಂತೆ ವಿಷಯ ನಿರೂಪಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಕಾರಣಗಳನ್ನು ಸಂಯೋಜಿಸಲು ಸಮರ್ಥರಾದಲ್ಲಿ, ಅದನ್ನು ಸಲ್ಲಿಸುವಲ್ಲಿನ ವಿಳಂಬವು ಅಂಥ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಪ್ರತಿಕೂಲವೆಂದು ಪರಿಗಣಿಸಲಾಗುವುದಿಲ್ಲ.ಪ್ರಥಮ ಮಾಹಿತಿ ವರದಿಯನ್ನು ವಿಳಂಬವಾಗಿ ದಾಖಲಿಸಲು ಸಾಕಷ್ಟು ನಂಬಲರ್ಹ ಕಾರಣಗಳಿರುತ್ತವೆ.ಸಂತ್ರಸ್ಥನ ರಕ್ತ ಸಂಬಂಧಿಗಳು ಒಂದು ಮಟ್ಟಿಗಿನ ಮನಃಶಾಂತತೆಯನ್ನು ಮರಳಿ ಪಡೆಯಲು ಸಮರ್ಥರಾಗುವವರೆಗೆ ಮತ್ತು ಅದನ್ನು ದಾಖಲಿಸಲು ಸಾವರಿಸಿಕೊಳ್ಳುವವರೆಗೆ, ಇದರಲ್ಲಿ ಸ್ವಲ್ಪ ಮಟ್ಟಿಗಿನ ವಿಳಂಬವಾದಾಗ್ಯೂ, ಇದು ಮನ್ನಣೆಗೆ ಅರ್ಹವಾಗಿರುತ್ತದೆ.ಇಂಥ ಸಂದರ್ಭಗಳಲ್ಲಿ, ಸಂಯೋಜಿತ ಕಾರಣಗಳ ಮೂಲಕ ದೂರು ಸಲ್ಲಿಸುವಲ್ಲಿನ ವಿಳಂಬಕ್ಕಿಂತ ಪ್ರಥಮ ಮಾಹಿತಿ ವರದಿಯು ವಿಶ್ವಾಸಾರ್ಹತೆಯು ಹೆಚ್ಚು ಮಹತ್ವ ಉಳ್ಳದ್ದಾಗಿರುತ್ತದೆ.ಚ

17. ಬಿಮ್ಲಾ ದೇವಿ ಹಾಗೂ ಇತರರು -ವಿರುದ್ಧ-ಹಿಮಾಚಲ್ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಇತರರು 2- ಮೊಕದ್ದಮೆಯಲ್ಲಿನ ಮತ್ತೊಂದು ತೀರ್ಪಿನಲ್ಲಿ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನಿರ್ದಿಷ್ಟ ರೀತಿಯಲ್ಲಿ ನಿರ್ದಿಷ್ಟ ಬಸ್ಸಿನ ಮೂಲಕ ಚ ಸಂಭವಿಸಿದ ಅಪಘಾತಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಾದ ಸಾಕ್ಷ್ಯವನ್ನು ಒದಗಿಸಲು ಕ್ಲೇಮುದಾರರಿಗೆ ಸಾಧ್ಯವಾಗದಿರಬಹುದಾಗಿದ್ದು, ಕ್ಲೇಮುದಾರರು ಕೇವಲ ಹೆಚ್ಚಿನ ಸಂಭಾವ್ಯತೆಯ

ವ್ಯಾಪಕತೆಯ ಒರೆಗಲ್ಲಿನ ಮೇಲೆ ಮಾತ್ರ ತಮ್ಮ ವಾದವನ್ನು ಮಂಡಿಸಬೇಕಾಗಿರುತ್ತದೆ; ಯುಕ್ತ ಸಂದೇಹವನ್ನು ಮೀರಿದ ನಿರ್ಣಾಯಕ ಸಾಕ್ಷ್ಯವನ್ನು ಅನ್ವಯಿಸಲಾಗುವುದಿಲ್ಲ; ಅಂತೆಯೇ ಬಸ್ಸಿನ ಚಾಲಕ ಹಾಗೂ ನಿರ್ವಾಹಕರನ್ನು ತಪ್ಪಾಗಿ ಅರ್ಥೈಸುವುದಕ್ಕೆ ಯಾವುದೇ ಕಾರಣಗಳಿರುವುದಿಲ್ಲ ಎಂದು ಅಭಿಪ್ರಾಯಪಟ್ಟಿದೆ.

18. ಸುನಿತಾ ವಿರುದ್ಧ-ರಾಜಸ್ಥಾನ್ ಸರ್ಕಾರ 3 ಈ ಇನ್ನೊಂದು ಮೊಕದ್ದಮೆಯಲ್ಲಿ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನ್ಯಾಯಾಧಿಕರಣವು ಚ ಪಕ್ಷಕಾರರ ವಾದಗಳಿಗೆ ಕಟ್ಟುನಿಟ್ಟಾಗಿ ಬದ್ಧವಾಗಿರುವುದಿಲ್ಲ, ಮನಸ್ಸಿನಲ್ಲಿಟ್ಟು ಕೊಳ್ಳಬೇಕಾದ ನಿರ್ಣಾಯಕ ಸಾಕ್ಷ್ಯವು ಸಂಭಾವ್ಯತೆಗಳ ಬಾಹುಳ್ಯವಾಗಿರುತ್ತದೆಯೇ ಹೊರತು, ಎಲ್ಲಾ ಯುಕ್ತ ಸಂದೇಹಗಳನ್ನು ಮೀರಿದ ಸಾಕ್ಷ್ಯದ ಕಟ್ಟುನಿಟ್ಟಾದ ಸಾಕ್ಷ್ಯವಾಗಿರಬೇಕಾಗಿಲ್ಲ, ಉಚ್ಚ ನ್ಯಾಯಾಲಯವು ಸಾಕ್ಷ್ಯದ ಕಟ್ಟುನಿಟ್ಟಾದ ವ್ಯಾಖ್ಯಾನವನ್ನು ಸಮರ್ಥಿಸುವುದಿಲ್ಲ.ಕ್ರಿಮಿನಲ್ ಕಾನೂನಿನಡಿಯಲ್ಲಿನ ಖಂಡನೀಯತೆಯನ್ನು ಸುಸ್ಥಾಪಿಸಲು ಅಗತ್ಯಪಡಿಸಿದ ಸಾಕ್ಷ್ಯ ಸ್ವರೂಪವು ಹೊಣೆಗಾರಿಕೆಯನ್ನು ಸೃಜಿಸಲು ವೈಯಕ್ತಿಕ ಅಪರಾಧದ ಕಾನೂನಿನಡಿಯಲ್ಲಿ ಅಗತ್ಯಪಡಿಸಿದ ನಿರ್ಣಾಯಕತೆಗಿಂತ ತುಂಬಾ ಹೆಚ್ಚಿನದಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿದೆ.

19. ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಅನುಸರಿಸಿ, ಮೀನಾಕ್ಷಮ್ಮ ವಿರುದ್ಧ ಹನುಮಂತಪ್ಪ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಕ್ರಿಮಿನಲ್ ಪ್ರಕರಣವು ದಾಖಲಾಗದಿರುವುದಕ್ಕೆ ಯಾವುದೇ ಪ್ರತಿಕೂಲ ಊಹೆಯನ್ನು ತಳೆಯಬಾರದು ಎಂದು ಅಭಿಪ್ರಾಯಪಟ್ಟಿದೆ.ಪೊಲೀಸರಿಗೆ ಅಪಘಾತದ ಬಗ್ಗೆ ವೈದ್ಯಕೀಯ ಅಧಿಕಾರಿಗಳು ವರದಿಯನ್ನು ಸಲ್ಲಿಸುವಲ್ಲಿ ವಿಫಲರಾಗಿರುತ್ತಾರೆಂಬ ಒಂದೇ ಕಾರಣಕ್ಕೆ ಕ್ಲೇಮನ್ನು ನಿರಾಕರಿಸಲು ಯಾವುದೇ ಆಧಾರವಿರುವುದಿಲ್ಲ.ಮೇಲಿನ ಸದರಿ ತೀರ್ಪುಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಚ ಹಿನ್ನೆಲೆಯಲ್ಲಿ, ಕ್ಲೇಮುದಾರನುದಿನಾಂಕ: 20.6.2013 ರಿಂದ 02.07.2013 ರವರೆಗೆ 12 ದಿನಗಳ ಕಾಲ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಹಾಗೂ ತರುವಾಯದಿನಾಂಕ: 20.7.2013 ರಂದು ಈತ ಬಿಡುಗಡೆಯಾದ ತರುವಾಯವೂ ಕೂಡ, ದೂರನ್ನು ನೀಡಿರಲಿಲ್ಲವೆಂಬ ಮಾತ್ರಕ್ಕೆ, ಈತ ಆಸ್ಪತ್ರೆಗೆ ಹೋದದ್ದು, ರಸ್ತೆ ಅಪಘಾತದಲ್ಲಿ ಗಾಯಗಳುಂಟಾದದ್ದು, ಕ್ಲೇಮುದಾರನನ್ನು ಕೆಲಸಕ್ಕೆ ನಿಯೋಜನೆಗೊಳಿಸಿದ್ದಂಥ ಮಾಲೀಕನಿಗೆ ಸಂಬಂಧಿಸಿದಂಥ ವಾಹನದ ಚಾಲಕನು ಅಪಘಾತಕ್ಕೆ ಕಾರಣವಾದದನ್ನು ವೈದ್ಯರ ಎದುರು ಸ್ವತಃ ಈತನೇ ಬಹಿರಂಗಪಡಿಸಿರುವಾಗ, ಅರ್ಜಿದಾರನ ಕ್ಲೇಮನ್ನು ಅನುಮಾನಿಸಲು ಯಾವುದೇ ಆಧಾರವಿರುವುದಿಲ್ಲ.ಕೇಮುದಾರನು ಆರಂಭದಲ್ಲಿ ಅವರುಗಳ ನಡುವೆ ಈ ವಿವಾದವನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳಲು ಆಲೋಚಿಸಿದ್ದು, ತರುವಾಯ ಆತನಿಗೆ ಉಂಟಾಗಿದ್ದ ಗಾಯಗಳು ಉಲ್ಬಣಗೊಂಡು ಶಸ್ತ್ರಚಿಕಿತ್ಸೆಗೆ ಒಳಪಟ್ಟಾಗ, ಈತ ದೂರನ್ನು ದಾಖಲಿಸಲು ಆಲೋಚಿಸಿರಬಹುದು.ವಿಳಂಬಕ್ಕೆ ಅವನು ಮನವರಿಕೆಯಾಗುವಂತೆ ವಿವರಿಸಿರುತ್ತಾನೆ.ಗಾಯಗೊಂಡ ವ್ಯಕ್ತಿಯು ಮೂಳೆ ಮುರಿತದ ಗಾಯಗಳಿಗೆ ಒಳಗಾಗಿದ್ದರಿಂದ ಯಾರೊಬ್ಬರೂ ಕೂಡಲೇ ದೂರನ್ನು ದಾಖಲಿಸಬೇಕೆಂದು ನಿರೀಕ್ಷಿಸಲಾಗುವುದಿಲ್ಲ.ಅದರಲ್ಲೂ ಅವನು ಆಸ್ಪತ್ರೆಗೆ ದಾಖಲಾಗುವ ಸಮಯದಲ್ಲಿ ಈಗಾಗಲೇ ವೈದ್ಯರಿಗೆ ಇದನ್ನು ತಿಳಿಸಿರುವಾಗ, ಹಾಗೆ ನಿರೀಕ್ಷಿಸಲು ಸಾಧ್ಯವಿಲ್ಲ.ಪೊಲೀಸರಿಗೆ ಈ ವಿಷಯವನ್ನು ತಿಳಿಸಬೇಕಾದದ್ದು ವೈದ್ಯರ ಕರ್ತವ್ಯವಾಗಿದ್ದು, ಪ್ರತಿಯಾಗಿ ಪೊಲೀಸರು ಆತನ ಹೇಳಿಕೆಯನ್ನು ದಾಖಲಿಸಬೇಕಾಗಿತ್ತು.ವೈದ್ಯರ ತಪ್ಪಿಗೆ ಅರ್ಜಿದಾರರ ಕ್ಲೇಮನ್ನು ನಿರಾಕರಿಸಲು ಯಾವುದೇ ಕಾರಣವಿರುವುದಿಲ್ಲ.ಆದ್ದರಿಂದ, ದೂರನ್ನು ದಾಖಲಿಸುವಲ್ಲಿ ಆದ ವಿಳಂಬವನ್ನು ಕೇಮುದಾರರು ವಿವರಿಸಿರುತ್ತಾರೆಂದೂ, ಆದ್ದರಿಂದ, ಅರ್ಜಿದಾರರ ಕ್ಲೇಮನ್ನು ತಡೆದಿಡಬಾರದೆಂಬುದು ನನ್ನ ಅಭಿಪ್ರಾಯವಾಗಿರುತ್ತದೆ.ಅದರೊಂದಿಗೆ, ವಾಹನದ ಮಾಲೀಕನು

ನಿರ್ಲಕ್ಷ್ಯದ ಚಾಲನೆ ಮತ್ತು ಅಪಘಾತವನ್ನು ನಿರಾಕರಿಸಿದಾಗ್ಯೂ, ಈ ನ್ಯಾಯಾಲಯದ ಮುಂದೆ ಯಾವುದೇ ಅಪೀಲನ್ನು ಸಲ್ಲಿಸುವ ಮೂಲಕ ನ್ಯಾಯಾಧಿಕರಣದ ಸದರಿ ನಿರ್ಣಯಗಳನ್ನು ಪ್ರಶ್ನಿಸಿರುವುದಿಲ್ಲ.ವಿಷಯ ಹೀಗಿರುವಾಗ, ವಿಮಾದಾರರು ಮಾಡುತ್ತಿರುವ ಪ್ರತಿವಾದ ಹಾಗೂ ವಿಮಾದಾರರ ಪರ ವಾದ ಮಾಡುತ್ತಿರುವ ವಕೀಲರು ಮಂಡಿಸಿರುವ ವಾದಗಳನ್ನು ಒಪ್ಪಿಕೊಳ್ಳಲಾಗುವುದಿಲ್ಲ.

20. ವಿಮಾದಾರರ ಪರ ನ್ಯಾಯವಾದಿಗಳು ಬಜಾಜ್ ಅಲಯನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿ ಅಮಿಟೆಡ್ ಇದರ ವ್ಯವಸ್ಥಾಪಕರ (ಮೂಲಕ) -ವಿರುದ್ಧ ಬಿ.ಸಿ. ಕುಮಾರ್ ಹಾಗೂ ಯೋಗನರಸಿಂಹ ಮೊಕದ್ದಮೆಯಲ್ಲಿ ನೀಡಿದೆ.ಈ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದರೂ, ಸದರಿ ಮೊಕದ್ದಮೆಯಲ್ಲಿ, ಪ್ರತ್ಯರ್ಜಿದಾರರು ಸಲ್ಲಿಸಿರುವ ಕ್ಲೇಮು ಅರ್ಜಿಯು ಸುಳ್ಳಿನದಾಗಿದ್ದು, ಕ್ರಿಮಿನಲ್ ನ್ಯಾಯಾಲಯದ ಮುಂದೆ ಚಾಲಕ ತನ್ನೊಪ್ಪಿಕೊಂಡನೆಂಬ ಮಾತ್ರಕ್ಕೆ ನ್ಯಾಯಾಧಿಕರಣವು ಐತೀರ್ಪನ್ನು ಹೊರಡಿಸಲಿಲ್ಲ ಹಾಗೂ ತನ್ನ ಮುಂದೆ ಇರುವ ಸಾಕ್ಷ್ಯವನ್ನು ತುಂಬಾ ಜಾಗರೂಕತೆಯಿಂದ ಪರಿಶೀಲಿಸಬೇಕಾಗಿತ್ತು.ಚಾಲಕ ತನ್ನೊಪ್ಪಿಕೊಂಡಿದ್ದನೆಂಬ ಕ್ಲೇಮುದಾರರ ನಿವೇದನೆಯ ಮೇಲೆ ಹೆಚ್ಚಿನ ಒತ್ತನ್ನು ನೀಡಲಾಗಿರುತ್ತದೆ.ಆದಾಗ್ಯೂ, ಈ ಪ್ರಕರಣದಲ್ಲಿ ನಿಶಾನೆ ಪಿ .6 ಗಾಯ ಪ್ರಮಾಣಪತ್ರವು, ದೂರನ್ನು ದಾಖಲಿಸುವ ಒ ೦ ದು ತಿಂಗಳಿಗೂ ಮೊದಲು, ಅಂದರೆ ವಿವಾದಾತೀತ ಸಮಯದಲ್ಲಿ ನಮೂದಿಸಲಾದ ರಸ್ತೆ ಅಪಘಾತದಲ್ಲಿ ಕ್ಲೇಮುದಾರನಿಗೆ ಗಂಭೀರ ಸ್ವರೂಪದ ಗಾಯಗಳುಂಟಾದವೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.ಆದ್ದರಿಂದ ವಿಮಾದಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳು ಒಪ್ಪಲರ್ಹವಾಗಿರುವುದಿಲ್ಲ.ವಿಮಾದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಮೊಕದ್ದಮೆಯಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ್ದ ಮತ್ತೊಂದು ತೀರ್ಪನ್ನು ಅವಲಂಬಿಸಿದ್ದು, ಅದರಲ್ಲಿ ಅಪೀಲುದಾರನಿಗೆ ಯುಕ್ತ ಅವಕಾಶವನ್ನು ಒದಗಿಸಿದ ತರುವಾಯ ಹೊಸದಾಗಿ ಕ್ಲೇಮುದಾರರು ಮಂಡಿಸುವ ಕ್ಲೇಮುಗಳನ್ನು ಪರಿಗಣಿಸುವಂತೆ ನ್ಯಾಯಾಧಿಕರಣಕ್ಕೆ ನಿರ್ದೇಶನ ನೀಡಿರುತ್ತದೆ.ಸದರಿ ಮೊಕದ್ದಮೆಯಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಷಯವನ್ನು ಹೊಸದಾಗಿ ಪರಿಗಣಿಸುವಂತೆ ನ್ಯಾಯಾಧಿಕರಣವನ್ನು ಒತ್ತಾಯಿಸಿರುತ್ತದೆ.ನ್ಯಾಯಾಧಿಕರಣವು ಸಾಕ್ಷ್ಯವನ್ನು ವಿವೇಚಿಸಿರುವುದಕ್ಕೆ ಸಂಬಂಧಿಸಿದಂತೆ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿರುವ ಕೆಲವು ತತ್ವಗಳ ಬಗ್ಗೆ ವಿವಾದವಿರುವುದಿಲ್ಲ.ವೀರಪ್ಪ ಮತ್ತು ಇನ್ನೊಬ್ಬರು ವಿರುದ್ಧ ಸಿದ್ದಪ್ಪ ಮತ್ತು ಇನ್ನೊಬ್ಬರು ಮೊಕದ್ದಮೆಯಲ್ಲಿ ನ್ಯಾಯವಾದಿಗಳು ಉದಾಹರಿಸಿದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ತೀರ್ಪಿನಲ್ಲಿ, ಚ ಒಪ್ಪಿಗೆಯು ಸಾಕ್ಷ್ಯದ ಅತ್ಯುತ್ತಮ ಮಾರ್ಗವಾಗಿದ್ದರೂ, ಅದನ್ನೇ ಅತ್ಯಂತ ನಿರ್ಣಾಯಕವೆಂದು ಒಪ್ಪಿಕೊಳ್ಳಲಾಗುವುದಿಲ್ಲ.ಈ ಮೊಕದ್ದಮೆಯಲ್ಲಿ ಕ್ಲೇಮುದಾರರು ಮಾಡಿಕೊಂಡ ಒಪ್ಪಿಗೆ ಮಾತ್ರವೇ ವಿಮಾದಾರರ ಪರ ನ್ಯಾಯವಾದಿಗಳ ವಾದವನ್ನು ಒಪ್ಪಿಕೊಳ್ಳಲು ಹಾಗೂ ಕ್ಲೇಮುದಾರರ ಇಡೀ ವಾದವನ್ನು ತಿರಸ್ಕರಿಸಲು ಆಧಾರವಾಗಿರುವುದಿಲ್ಲ.ಈ ತೀರ್ಪುಗಳು ವಿಮಾದಾರನಿಗಿಂತ ಕ್ಲೇಮುದಾರನಿಗೆ ಹೆಚ್ಚು ಸಹಾಯಕವಾಗಿವೆ.ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಹಿಂದೆ ಚ ಹೇಳಿದ ಕೇಮುದಾರರು ಉದಾಹರಿಸಿದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹಾಗೂ ಮೇಲೆ ಹೇಳಿದ ನಿರ್ಣಯಗಳ ಹಾಗೂ ಚರ್ಚೆಗಳ ಹಿನ್ನೆಲೆಯಲ್ಲಿ, ಅಪಘಾತ ಸಂಭವಿಸಿದ 30 ದಿನಗಳ ತರುವಾಯ ಹಾಗೂ ಆಸ್ಪತ್ರೆಯಿಂದ ಬಿಡುಗಡೆಯಾದ 18 ದಿನಗಳ ತರುವಾಯ ದೂರು ಸಲ್ಲಿಸಿರುತ್ತಾನೆಂಬ ಮಾತ್ರಕ್ಕೆ ಕ್ಲೇಮುದಾರನು ಮೌಖಿಕವಾಗಿ ಹಾಗೂ ದಸ್ತಾವೇಜೀಯ ಸಾಕ್ಷ್ಯಗಳೆರಡನ್ನೂ ಸಲ್ಲಿಸಿದ ಮೇಲೂ ಇಡೀ ವಾದವನ್ನು ತಿರಸ್ಕರಿಸಲು ಯಾವುದೇ ಆಧಾರವಿರುವುದಿಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ.ವಾಹನದ ಮಾಲೀಕನೇ ಸ್ವತಃ ರಸ್ತೆಯ ಮೇಲೆ

ಬರುತ್ತಿದ್ದ ಎಮ್ಮೆಗೆ ಗುದ್ದುವುದನ್ನು ಹಾಗೂ ಅಪಘಾತವನ್ನು ತಪ್ಪಿಸಲು ಮಾಡಿದ ಅನಿವಾರ್ಯ ಪ್ರಯತ್ನದಿಂದಾಗಿ ವಾಹನದ ಮೇಲೆ ನಿಯಂತ್ರಣವನ್ನು ಕಳೆದುಕೊಂಡು ವಾಹನವು ಮೊಗಚಿಕೊಂಡು ಬೀಳುವಂತೆ ಆಯಿತೆಂದು ಹೇಳಿರುತ್ತಾನೆ.1 ನೇ ಹಾಗೂ 2 ನೇ ಪ್ರತ್ಯರ್ಜಿದಾರರು ಕ್ಲೇಮುದಾರನೊಂದಿಗೆ ಷಾಮೀಲಾಗಿದ್ದಲ್ಲಿ, ಅವರು ತಪ್ಪನ್ನು ಒಪ್ಪಿಕೊಳ್ಳಬಹುದಿತ್ತು ಹಾಗೂ ಅರ್ಜಿಗೆ ಯಾವುದೇ ಆಕ್ಷೇಪಣೆಗಳ ಹೇಳಿಕೆಗಳನ್ನು ಸಲ್ಲಿಸದಿರಬಹುದಿತ್ತು ಹಾಗೂ ಏಕ ಪಕ್ಷೀಯವಾಗಿ ಉಳಿದುಕೊಳ್ಳಬಹುದಿತ್ತು.ಆದರೆ, ಈ ಮೊಕದ್ದಮೆಯಲ್ಲಿ, ಮಾಲೀಕನು ಆಕ್ಷೇಪಣೆಯನ್ನು ಸಲ್ಲಿಸುವ ಮೂಲಕ ಮೊಕದ್ದಮೆಯಲ್ಲಿ ವಾದಿಸಿರುತ್ತಾನೆ.ವಿಷಯ ಹೀಗಿರುವಾಗ, ವಿಮಾದಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ಒಪ್ಪಿಕೊಳ್ಳಲಾಗುವುದಿಲ್ಲ.ಆದ್ದರಿಂದ ಪ್ರಶ್ನಿತ ವಾಹನದ ಮಾಲೀಕ ಹಾಗೂ ವಿಮಾದಾರನ ಮೇಲೆ ಜಂಟಿಯಾಗಿ ಹಾಗೂ ಪ್ರತ್ಯೇಕವಾಗಿ ಹೊಣೆಗಾರಿಕೆಯನ್ನು ಹೊರಿಸುವಲ್ಲಿ ನ್ಯಾಯಾಧಿಕರಣವು ಯಾವುದೇ ಕಾನೂನುಬಾಹಿರತೆ ಅಥವಾ ತಪ್ಪನ್ನು ಎಸಗಿರುವುದಿಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ.ಹಾಗಾಗಿ, 1 ನೇ ವಿವಾದಾಂಶಕ್ಕೆ ಕ್ಲೇಮುದಾರರ ಪರವಾಗಿ ಹಾಗೂ ವಿಮಾದಾರರ ವಿರುದ್ಧವಾಗಿ ಉತ್ತರಿಸಲಾಗಿರುತ್ತದೆ.

21. ಮುಂದಿನ ವಿವಾದವು, ನ್ಯಾಯಾಧಿಕರಣವು ನೀಡಿದ ಪರಿಹಾರದ ಮೊತ್ತಕ್ಕೆ ಸಂಬಂಧಿಸಿದ್ದಾಗಿದ್ದು, ಕ್ಲೇಮುದಾರನು, ವಾರ್ಷಿಕ 2 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ತಾನು ಗಳಿಸುತ್ತಿದ್ದು ಸ್ವಯಂ ಉದ್ಯೋಗಿಯೆಂದು ಚ ಹೇಳಿಕೊಂಡಿರುತ್ತಾನೆ.ಆದಾಗ್ಯೂ, ಈತ ತನ್ನ ಆದಾಯವನ್ನು ರುಜುವಾತುಪಡಿಸುವ ಯಾವುದೇ ದಸ್ತಾವೇಜನ್ನು ಹಾಜರುಪಡಿಸಿರುವುದಿಲ್ಲ.ನ್ಯಾಯಾಧಿಕರಣವು ಪ್ರತಿ ತಿಂಗಳಿಗೆ 5,000/- ರೂಪಾಯಿಗಳನ್ನು ಪರಿಗಣಿಸಿದ್ದು, ಅಪಘಾತವು 2013 ನೇ ವರ್ಷದಲ್ಲಿ ಸಂಭವಿಸಿರುವುದರಿಂದ, ಇದು ಅತ್ಯಂತ ಅಲ್ಪಮಟ್ಟದ ಮೊತ್ತವಾಗಿರುತ್ತದೆ.ಒಬ್ಬ ಕೂಲಿಯಾಗಿ ಕಾರ್ಯನಿರ್ವಹಿಸುವವನಿಗೂ ಕೂಡ ಈ ನ್ಯಾಯಾಲಯವು ತಿಂಗಳಿಗೆ 7,000/-ರೂಪಾಯಿಗಳನ್ನು ಕಾಲ್ಪನಿಕ ವೇತನವೆಂದು ಪರಿಗಣಿಸುತ್ತದೆ ಹಾಗೂ ಆತನ ವರಮಾನವನ್ನು ತಿಂಗಳಿಗೆ 7,000/- ರೂ.ಗಳೆಂದು ಪರಿಗಣಿಸಬೇಕಾಗಿರುತ್ತದೆ.ಅಂಗವೈಕಲ್ಯಕ್ಕೆ ಸಂಬಂಧಿಸಿದಂತೆ ಕೇಮುದಾರನು, ಪ್ರಾ.ಸಾ .2 ಡಾ || ಲಕ್ಷ್ಮೀನಾರಾಯಣರೆಂಬುವವರನ್ನು ವಿಚಾರಣೆಗೆ ಒಳಪಡಿಸಿದ್ದು, ತಮ್ಮ ಸಾಕ್ಷ್ಯದಲ್ಲಿ ಅವರು ಕ್ಲಿನಿಕಲ್ ತಪಾಸಣೆಯ ತರುವಾಯ ಶೇ .20 ರಷ್ಟು ಪಾರ್ಶ್ವಕ ಖಾಯಂ ಅಂಗವೈಕಲ್ಯವನ್ನು ಕೇಮುದಾರನು ಹೊಂದಿರುತ್ತಾನೆಂದು ಹೇಳಿರುತ್ತಾರೆ.ವೈದ್ಯರ ಈ ಸಾಕ್ಷ್ಯವನ್ನು ನಂಬದಿರಲು ಪ್ರತ್ಯರ್ಜಿದಾರ-ವಿಮಾದಾರನ ಪರ ಮಾನ್ಯ ನ್ಯಾಯವಾದಿಯೂ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.ಆದಾಗ್ಯೂ, ಇಡೀ ದೇಹಕ್ಕೆ ಸಂಬಂಧಿಸಿದ ಅಂಗವೈಕಲ್ಯವೇನು ಎಂಬ ಬಗ್ಗೆ ಏನನ್ನೂ ಹೇಳಿರುವುದಿಲ್ಲ.ಸಾಮಾನ್ಯವಾಗಿ ಅಂಗವೈಕಲ್ಯದ ಶೇಕಡಾವಾರನ್ನು ಇಡೀ ದೇಹಕ್ಕೆ ಹೋಲಿಸಿದರೆ ಒಂದು ನಿರ್ದಿಷ್ಟ ಭಾಗ ಅಥವಾ ಮುಂದೋಳಿನ ಸಂಬಂಧದಲ್ಲಿ ಹೇಳುವಾಗ, ಅದು 1/ 3 ರಷ್ಟಿರಬೇಕು.ಆದ್ದರಿಂದ, ನಾನು ಇಡೀ ದೇಹಕ್ಕೆ ಸಂಬಂಧಿಸಿದಂತೆ ಶೇ .7 ರಷ್ಟು ಅಂಗವೈಕಲ್ಯವನ್ನು ಪರಿಗಣಿಸಬೇಕೆಂದು ಪ್ರಸ್ತಾಪಿಸುತ್ತೇನೆ.ಕೇಮುದಾರನ ಗಳಿಕೆ ಸಾಮರ್ಥ್ಯದ ನಷ್ಟವನ್ನು ಶೇ .7 ಎಂದು ಪರಿಗಣಿಸಿದಲ್ಲಿ, ಅದು 490/-ರೂಪಾಯಿಗಳಾಗುತ್ತದೆ.(7000 X 7%) x 12x17 = 99,960)

22. ನನ್ನ ಪ್ರಕಾರ, ನೋವು ಹಾಗೂ ಯಾತನೆಗೆ ಸಂಬಂಧಿಸಿದಂತೆ ನ್ಯಾಯಾಧಿಕರಣವು 20,000/- ರೂಪಾಯಿಗಳನ್ನು ನಿಗದಿಪಡಿಸಿದೆ.ಆ ಹಣವನ್ನು ಉಳಿಸಿಕೊಳ್ಳಬೇಕಾಗಿರುತ್ತದೆ.ನ್ಯಾಯಾಧಿಕರಣವು 21,428/- ರೂಪಾಯಿಗಳನ್ನು ವೈದ್ಯಕೀಯ ವೆಚ್ಚಗಳೆಂದು ಲೆಕ್ಕಹಾಕಿದ್ದು, ಅದನ್ನು ಹಾಗೆ ಉಳಿಸಿಕೊಳ್ಳಲಾಗಿರುತ್ತದೆ.ಆದಾಗ್ಯೂ, ನ್ಯಾಯಾಧಿಕರಣವು ಆಹಾರ, ಪಾಲನೆ-ಪೋಷಣೆ ಹಾಗೂ

ಆನುಷಂಗಿಕವಾದ ಇತರೆ ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಮೊಬಲಗಿನ ಐತೀರ್ಪು ನೀಡಿರುವುದಿಲ್ಲ.ಕೇಮುದಾರನನ್ನು 12 ದಿನಗಳಿಗಿಂತ ಹೆಚ್ಚು ಕಾಲ ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು, ತರುವಾಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರಬಹುದಾಗಿದ್ದರೆ, ನಾನು, ಆಹಾರ, ಪಾಲನೆ-ಪೋಷಣೆ ಹಾಗೂ ಆನುಷಂಗಿಕ ವೆಚ್ಚಗಳಿಗೆ ಸಂಬಂಧಿಸಿದಂತೆ 10,000/-ರೂಪಾಯಿಗಳ ಮೊಬಲಗನ್ನು ನಿಗದಿಪಡಿಸಲು ಉದ್ದೇಶಿಸುತ್ತೇನೆ.

23. ಅಲ್ಲದೆ, ನ್ಯಾಯಾಧಿಕರಣವು, ಆದಾಯ ನಷ್ಟ ಹಾಗೂ ಹಾಸಿಗೆ ಹಿಡಿದಿದ್ದ ಅವಧಿಗೆ ಸಂಬಂಧಿಸಿದಂತೆ ಯಾವುದೇ ಮೊಬಲಗನ್ನು ನೀಡಿರುವುದಿಲ್ಲ.ತಿಂಗಳಿಗೆ 7,000/- ರೂ.ಗಳಂತೆ ನಾಲ್ಕು ತಿಂಗಳುಗಳಿಗೆ ಪರಿಗಣಿಸಿದಲ್ಲಿ, ಇದು 28,000/

ರೂಪಾಯಿಗಳಾಗಿರುತ್ತದೆ.ಹಾಗಾಗಿ, ಕ್ಷೇಮುದಾರನು ಈ ಮುಂದಿನಂತೆ ಹೆಚ್ಚಿಸಲಾದ ಪರಿಹಾರಕ್ಕೆ ಹಕ್ಕುಳ್ಳವನಾಗಿರುತ್ತಾನೆ:

| | |
|---|---|
| ಗಳಿಕೆ ಸಾಮರ್ಥ್ಯದ ನಷ್ಟ | ರೂ. 99,960/ |
| ವೈದ್ಯಕೀಯ ವೆಚ್ಚ | ರೂ. 21,428/ |
| ನೋವು ಮತ್ತು ಯಾತನೆ | ರೂ. 20,000/ |
| ಆಹಾರ ಪೋಷಣೆ ಹಾಗೂ ಆನುಷಂಗಿಕ ವೆಚ್ಚಗಳು | ರೂ. 10,000/ |
| ಹಾಸಿಗೆ ಹಿಡಿದಿದ್ದ ಕಾಲಾವಧಿ ವೆಚ್ಚ | ರೂ. 28,000/ |
| ಒಟ್ಟು | ರೂ. 1,79,388/ |

24. ತತ್ಪರಿಣಾಮವಾಗಿ, ವಿಮಾದಾರನು ಸಲ್ಲಿಸಿದ ಅಪೀಲು ಎಂಎಫ್ ಸಂಖ್ಯೆ.101029/2016 ವಜಾಗೊಳಿಸಲು ತಕ್ಕದ್ದಾಗಿರುತ್ತದೆ ಹಾಗೂ ಸಲ್ಲಿಸಿದ ಅಪೀಲು ಎಂ.ಎಫ್.ಎ.ಸಂಖ್ಯೆ: 103862/2016 ನ್ನು ಭಾಗಶಃ ಅಂಗೀಕರಿಸಲಾಗಿರುತ್ತದೆ.ಕ್ಷೇಮುದಾರನು, ನ್ಯಾಯಾಧಿಕರಣವು ನೀಡಿದ್ದ 1,26,330/ರೂಪಾಯಿಗಳಿಗೆ ಪ್ರತಿಯಾಗಿ, ಕ್ಷೇಮುದಾರನು ಅರ್ಜಿಯ ದಿನಾಂಕದಿಂದ ವಸೂಲಾತಿಯ ಅವಧಿಯವರೆಗೆ ಶೇಕಡ 6 ರ ಬಡ್ಡಿಯೊಂದಿಗೆ 1,79,388-00 ರೂಪಾಯಿಗಳ ಪರಿಹಾರಕ್ಕೆ ಅರ್ಹನಾಗುತ್ತಾನೆ.

ವಿಮಾದಾರನು ಠೇವಣಿ ಮಾಡಿದ ಮೊಬಲಗನ್ನು ನ್ಯಾಯಾಧಿಕರಣಕ್ಕೆ ವರ್ಗಾವಣೆ ಮಾಡಬೇಕೆಂದು ನಿರ್ದೇಶಿಸಲಾಗಿದೆ.ನ್ಯಾಯಾಧಿಕರಣವು ಮಾಡಿರುವ ಠೇವಣಿಯ ಆದೇಶವು ನಿರಾತಂಕವಾಗಿರುತ್ತದೆ.

ಅಪೀಲುಗಳ ವಿಲೆಯ ಹಿನ್ನೆಲೆಯಲ್ಲಿ, ಯಾವುವಾದರೂ ಇತ್ಯರ್ಥಪಡಿಸುವ ಅಪೀಲು/ಗಳು ಇದ್ದಲ್ಲಿ, ಅವು ಪರಿಗಣಿಸಲು ಊರ್ಜಿತವಾಗಿರುವುದಿಲ್ಲ.ಹಾಗಾಗಿ, ಮಧ್ಯಂತರ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.